# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 24-12-2022

## ಬೀದರ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 66/2022 ಕಲಂ 379 ಐಪಿಸಿ :-

ದಿನಾಂಕ 23/12/2022 ರಂದು 13:18 ಗಂಟೆಗೆ ಫಿರ್ಯಾದಿ ಶ್ರೀ ಎಂ.ಡಿ ಆಜಮ ಪಾಶಾ ರವರು ನೀಡಿದ ದೂರಿನ ಸಾರಾಂಶವೆನೆಂದರೆ ದಿನಾಂಕ 16/12/2022 ರಂದು ಮಧ್ಯಾಹ್ನ 1:45 ಪಿ.ಎಂ ಗಂಟೆ ಸುಮಾರಿಗೆ ತನ್ನ ಮೊಟಾರ ಸೈಕಲ್ ನಂ ಕೆಎ38-ಎಸ್-4681 ಅಂ.ಕಿ35,000/-ರೂ ಬೆಲೆ ಬಾಳುವದು ಬೀದರ ನಗರದ ಜಾಮೀಯಾ ಮಜೀದ ಹತ್ತಿರ ನಿಲ್ಲಿಸಿ ನಮಾಜ ಮಾಡಿ ಮರಳಿ ಮಧ್ಯಾಹ್ನ 2:00 ಪಿ.ಎಂ ಗಂಟೆಗೆ ಹೊರಗಡೆ ಬಂದು ನೋಡಿದ್ದಾಗ ತನ್ನ ಮೊಟಾರ ಸೈಕಲ್ ಇರಲ್ಲಿಲ್ಲಾ, ಯಾರೋ ಅಪರಿಚಿತ ಕಳ್ಳರು ಕಳವು ಮಾಡಿಕೊಂಡು ಹೋಗಿರುತ್ತಾರೆ ಈ ಬಗ್ಗೆ ಕಾನೂನು ಪ್ರಕಾರ ಕ್ರಮ ಕೈಕೊಂಡು ತನ್ನ ಮೊಟಾರ ಸೈಕಲ್ ಪತ್ತೆ ಮಾಡಿಕೊಡಲು ವಿನಂತಿ ಅಂತ ಇದ್ದ ದೂರಿನ ಸಾರಾಂಶದ ಆಧಾರದ ಮೇಲಿಂದ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

## ಮಂಠಾಳ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 106/2022 ಕಲಂ 78(3) ಕೆಪಿ ಕಾಯ್ದೆ :-

ದಿನಾಂಕ:23/12/2022 ರಂದು 1130 ಗಂಟೆಗೆ ವಸೀಮ್ ಪಟೇಲ ಪಿ.ಎಸ್.ಐ ರವರು ಪೊಲೀಸ್ ಠಾಣೆಯಲ್ಲಿದ್ದಾಗ ಖಚಿತ ಮಾಹಿತಿ ಬಂದಿದ್ದೆನಂದರೆ ಉಜಳಂಬ ಗ್ರಾಮದ ಎಕ್ಕಂಬಾ ರೋಡಿನ ಏರಟೆಲ್ ಟಾವರ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಸಾರ್ವಜನಿಕರಿಂದ ಹಣ ಪಡೆದು ಮಟಾಕಾ ಎಂಬ ನಸೀಬಿನ ಜೂಜಾಟದ ನಂಬರ ಬರೆದುಕೊಳ್ಳುತ್ತಿದ್ದಾನೆ ಎಂದು ಖಚಿತ ಬಾತ್ಮಿ ಬಂದ ಮೇರೆಗೆ, ಸಿಬ್ಬಂದಿಯೊಂದಿಗೆ ಹೋಗಿ ನೋಡಲು ಏರಟೆಲ್ ಟಾವರ ಹತ್ತಿರ ರೋಡಿನ ಮೇಲೆ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಮಟಕಾ ಎಂಬ ಜೂಜಾಟದ ನಂಬರ ಬರೆಯಿಸಿ 01 ರೂಪಾಯಿ 80 ರೂಪಾಯಿ ಪಡೆಯಿರಿ ಅಂತಾ ಚಿರಾಡುತ್ತಾ ಸಾರ್ವಜನಿಕರಿಂದ ಹಣ ಪಡೆದು ನಂಬರ ಬರೆದುಕೊಳ್ಳುತ್ತಿದ್ದಾಗ ಸದರಿ ವ್ಯಕ್ತಿಯ ಮೇಲೆ ದಾಳಿ ಮಾಡಿ ಅವನಿಗೆ ಹಿಡಿದುಕೊಂಡು ಹೆಸರು ಮತ್ತು ವಿಳಾಸ ವಿಚಾರಿಸಲು ತನ್ನ ಹೆಸರು ಪ್ರಹ್ಲಾದ ತಂದೆ ಬಳಿರಾಮ ಜೋಗೆ ವಯ|| 50 ವರ್ಷ ಜಾ|| ಕಬ್ಬಲಿಗ, ಉ|| ಸಿಮೆಂಟ ವ್ಯಾಪಾರ, ಸಾ|| ಜೋಗೆವಾಡಿ ಗ್ರಾಮ ಅಂತಾ ತಿಳಿಸಿದ್ದು ಅವನ ವಿರುದ್ದ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.